# ಸದ್ಯವೇ ಇ-ರಸೀದಿ ವ್ಯವಸ್ಥೆ ಜಾರಿ

▪ **ವಿಕ ಸುದ್ದಿಲೋಕ** ಬೆಂಗಳೂರು

ಬಿಬಿಎಂಪಿ ಆಡಳಿತವು ಮಾಹಿತಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಮುಂದಾಗಿದ್ದು, ಪ್ರತಿ ಹಣಕಾಸಿನ ವ್ಯವಹಾರಕ್ಕೂ ಇ-ರಸೀದಿ ನೀಡುವ ವ್ಯವಸ್ಥೆಯನ್ನು ಸದ್ಯದಲ್ಲೇ ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸಲಿದೆ.



ಹಾಗೆಯೇ ಇ-ಟೆಂಡರ್ ಪ್ರಕ್ರಿಯೆಯಲ್ಲಿ ಮುಂಗಡ ಠೇವಣಿ (ಇಎಂಡಿ) ಹಾಗೂ ಟೆಂಡರ್ ಶುಲ್ಕವನ್ನು ಆನ್‌ಲೈನ್ ಮೂಲಕವೇ ಸ್ವೀಕರಿಸುವ ವ್ಯವಸ್ಥೆಯನ್ನು ಜಾರಿಗೆ ತರುತ್ತಿದ್ದು, ಆನ್‌ಲೈನ್ ಮೂಲಕವೇ ವ್ಯಾಪಾರ ಪರವಾನಗಿ ವಿತರಿಸಲು ಸಿದ್ಧತೆ ನಡೆಸಿದೆ.

ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ಪಾಲಿಕೆಯಲ್ಲಿ ವೆಚ್ಚ ಮಾಡಲಾಗುವ ಹಣಕ್ಕೆ ಸರಿಯಾದ ಲೆಕ್ಕ ನೀಡುವ ವ್ಯವಸ್ಥೆಯೇ ಇಲ್ಲದಂತಾಗಿದೆ. ಆಸ್ತಿ ತೆರಿಗೆ, ವ್ಯಾಪಾರ ಪರವಾನಗಿ ವಿತರಣೆ ಹಾಗೂ ನವೀಕರಣ ಸೇರಿದಂತೆ ಇತರೆ ರೂಪದಲ್ಲಿ ಸಂಗ್ರಹವಾಗುವ ಹಣವನ್ನು ಸಕಾಲದಲ್ಲಿ ಬ್ಯಾಂಕ್‌ಗೆ ಜಮಾ ಮಾಡುವುದಿಲ್ಲ, ಕೆಲವರು ವೈಯಕ್ತಿಕ ಕಾರಣಗಳಿಗೆ ಪಾಲಿಕೆ ಹಣ ಬಳಸಿ ದುರ್ಬಳಕೆ ಮಾಡಿಕೊಂಡಿರುವ ಪ್ರಕರಣಗಳೂ ನಡೆದಿವೆ.

ತೆರಿಗೆದಾರರು ಪಾವತಿಸುವ ಚೆಕ್‌ಗಳನ್ನು ನಿಗದಿತ ಅವಧಿಯೊಳಗೆ ಬ್ಯಾಂಕ್‌ಗೆ ಸಲ್ಲಿಸದ ಕಾರಣ ಲಕ್ಷಾಂತರ ರೂ. ಪಾಲಿಕೆಯ ಬೊಕ್ಕಸಕ್ಕೆ ಸೇರದಂತಾಗಿದೆ. ಈ ರೀತಿಯ ಸಾಕಷ್ಟು ಪ್ರಕರಣಗಳು ಸಂಭವಿಸಿದ್ದು, ಆರ್ಥಿಕ ವ್ಯವಸ್ಥೆ ಹದಗೆಡುವಂತಾಗಿದೆ.

ಹಾಗಾಗಿ ಪಾಲಿಕೆಯಲ್ಲಿ ಆರ್ಥಿಕ ಶಿಸ್ತು ತರುವ ನಿಟ್ಟಿನಲ್ಲಿ ಮಾಹಿತಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಪಾಲಿಕೆ ಆಡಳಿತ ಮುಂದಾಗಿದೆ. ಪಾಲಿಕೆ ಪ್ರತಿಯೊಂದು ವ್ಯವಹಾರದಲ್ಲಿ ಸ್ವೀಕರಿಸುವ ನಗದು, ಚೆಕ್, ಡಿ.ಡಿ.ಗೆ ಇ-ರಸೀದಿ ನೀಡುವ ವ್ಯವಸ್ಥೆ ಜಾರಿಗೊಳಿಸಿದೆ. ಈಗಾಗಲೇ ಕೆಲವೆಡೆ ಇ-ರಸೀದಿ ನೀಡಲಾಗುತ್ತಿದೆ.

ಕೇಂದ್ರ ಕಚೇರಿ ಹಾಗೂ ವಲಯ ಕಚೇರಿಗಳು ಸೇರಿದಂತೆ ಎಲ್ಲ ಹಂತದಲ್ಲೂ ಇ-ರಸೀದಿ ನೀಡುವ ಸೌಲಭ್ಯ ಕಲ್ಪಿಸಿದ್ದು, ಇದರ ನಿರ್ವಹಣೆ ಬಗ್ಗೆ ನೌಕರರಿಗೆ ತರಬೇತಿಯನ್ನೂ ನೀಡಿದೆ. ಅಲ್ಲದೇ ಗೊಂದಲ ನಿವಾರಣೆ ಹಾಗೂ ಅಗತ್ಯ ಮಾರ್ಗದರ್ಶನ ನೀಡುವ ಸಲುವಾಗಿ ತಜ್ಞರ ತಂಡ ರಚಿಸಲಾಗಿದ್ದು, ಒಂದೆರಡು ತಿಂಗಳ ಕಾಲ ಕಾರ್ಯ ನಿರ್ವಹಿಸಲಿದೆ. ಸದ್ಯದಲ್ಲೇ ಈ ವ್ಯವಸ್ಥೆ ಪೂರ್ಣ ಪ್ರಮಾಣದಲ್ಲಿ ಜಾರಿಯಾಗಲಿದ್ದು, ಸಾರ್ವಜನಿಕರು ಇನ್ನು ಮುಂದೆ ಇ-ರಸೀದಿಯನ್ನು ಕೇಳಿ ಪಡೆಯಬಹುದು.

**ಇ-ಟೆಂಡರಿಂಗ್‌ನಲ್ಲೂ ಬದಲಾವಣೆ:** ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಇಎಂಡಿ ಮೊತ್ತವನ್ನು ಸಂಬಂಧಪಟ್ಟ ಅಧಿಕಾರಿಗೆ ನೇರವಾಗಿ ಸಲ್ಲಿಸುವ ವ್ಯವಸ್ಥೆಯಿದೆ. ಇದರಿಂದ ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತದ ವಿವರವನ್ನು ಸುಲಭವಾಗಿ ಪತ್ತೆಹಚ್ಚಲು ಅವಕಾಶವಿರುವುದರಿಂದ ಅವ್ಯವಹಾರಕ್ಕೆ ಆಸ್ಪದ ನೀಡಿದಂತಾಗಿದೆ. ಹಾಗಾಗಿ ಇ-ಟೆಂಡರ್ ವ್ಯವಸ್ಥೆ ಕೂಡ ಪಾರದರ್ಶಕವಲ್ಲ ಎಂಬ ಆರೋಪವಿದೆ.

ಆ ಹಿನ್ನೆಲೆಯಲ್ಲಿ ಇಎಂಡಿ ಹಾಗೂ ಟೆಂಡರ್ ಪ್ರಕ್ರಿಯೆ ಶುಲ್ಕವನ್ನು ಆನ್‌ಲೈನ್ ಮೂಲಕವೇ ಸಲ್ಲಿಸುವ ವ್ಯವಸ್ಥೆಯನ್ನು ಮೂರು ತಿಂಗಳಲ್ಲಿ ಜಾರಿಗೊಳಿಸಲು ಸಿದ್ಧತೆ ನಡೆದಿದೆ. ಇ-ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಲ್ಲಿರುವ ವಿಧಾನವೇ ಇ-ಟೆಂಡರಿಂಗ್‌ನಲ್ಲೂ ಬರಲಿದೆ. ಇದರಿಂದ ಇ-ಟೆಂಡರಿಂಗ್ ಪ್ರಕ್ರಿಯೆ ಇನ್ನಷ್ಟು ಪಾರದರ್ಶಕವಾಗಿ ನಡೆಯಲು ಅನುಕೂಲವಾಗಲಿದೆ.

**ಆನ್‌ಲೈನ್‌ನಲ್ಲಿ ವ್ಯಾಪಾರ ಪರವಾನಗಿ:** ಹೊಸ ವ್ಯಾಪಾರ ಪರವಾನಗಿ ಹಾಗೂ ನವೀಕರಣವನ್ನು ಆನ್‌ಲೈನ್ ಮೂಲಕವೇ ಪಡೆಯುವ ವ್ಯವಸ್ಥೆ ಸದ್ಯದಲ್ಲೇ ಜಾರಿಗೆ ಬರಲಿದೆ. ಸ್ವಯಂ ಘೋಷಿತ ಆಸ್ತಿ ತೆರಿಗೆ ಪಾವತಿ ಮಾದರಿಯಲ್ಲಿಯೇ ಅಗತ್ಯ ವಿವರಗಳನ್ನು ದಾಖಲಿಸಿ, ನಿಗದಿತ ಶುಲ್ಕ ಪಾವತಿಸಿ, ವ್ಯಾಪಾರ ಪರವಾನಗಿಯನ್ನು ಆನ್‌ಲೈನ್ ಮೂಲಕ ಪಡೆಯಬಹುದು. ನಂತರ ಸಂಬಂಧಪಟ್ಟ ಅಧಿಕಾರಿಯು ಸ್ಥಳ ಪರಿಶೀಲನೆ ನಡೆಸಲಿದ್ದಾರೆ.

## ತಂತ್ರಜ್ಞಾನದ ಪರಿಣಾಮಕಾರಿ ಬಳಕೆ

'ಮಾಹಿತಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಪಾಲಿಕೆಯ ಹಣಕಾಸು ವ್ಯವಹಾರಗಳಲ್ಲಿ ಇ-ರಸೀದಿ ನೀಡುವ ವ್ಯವಸ್ಥೆ ಜಾರಿಯಾಗಿದ್ದು, 15 ದಿನಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಅನುಷ್ಠಾನವಾಗಲಿದೆ. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಆನ್‌ಲೈನ್‌ನಲ್ಲಿ ಇಎಂಡಿ ಹಾಗೂ ಟೆಂಡರ್ ಶುಲ್ಕ ಪಾವತಿಸುವ ವ್ಯವಸ್ಥೆ ಮೂರು ತಿಂಗಳೊಳಗೆ ಜಾರಿಗೆ ಬರಲಿದೆ. ಆನ್‌ಲೈನ್‌ನಲ್ಲಿ ವ್ಯಾಪಾರ ಪರವಾನಗಿ ನೀಡುವ ವ್ಯವಸ್ಥೆಯು ಸಿದ್ಧವಾಗಿದ್ದು, ಕಾಯಿದೆಗೆ ತಿದ್ದುಪಡಿ ತಂದು ತಿಂಗಳೊಳಗೆ ಅನುಷ್ಠಾನಗೊಳಿಸಲಾಗುವುದು'.

**-ಕೆ.ಆರ್.ನಿರಂಜನ್,** ವಿಶೇಷ ಆಯುಕ್ತ, ಬಿಬಿಎಂಪಿ